# LIBRARY & INFORMATION CENTRE

## GIT in NEWS

**Tarun Bharat 04-03-2016**

### जीआयटीत आजपासून क्वेस्टर्स आयटी महोत्सव

**बेळगाव :** जीआयटीच्या एमसीए विभागातर्फे क्वेस्टर्स-२०१६ दोन दिवशीय राष्ट्रीय आयटी महोत्सव आयोजित करण्यात आला आहे. शुक्रवार दि. ४ पासून दोन दिवस हा महोत्सव होणार आहे.

या महोत्सवांतर्गत तांत्रिक प्रबंध सादरीकरण, कोडींग, आयटी क्वीज, बेस्ट मॅनेजर आदी स्पर्धा घेतल्या जाणार आहेत.

**Deccan Herald 04-03-2016**

### 2-day national IT fest on March 4,5

**BELAGAVI, DHNS:** KLS Gogte Institute of Technology Department of Master of Computer Applications is organising a two-day national level IT fest 'Questers-16' on March 4 and 5.

Event will explore the skill-sets of the participants virtually giving them simulation of the technical scenario. It comprises of events such as Technical Paper Presentation, Coding, IT Quiz, Best Manager and many more.

During the event it has also been planned to have couple of expert talks on the theme of the event.

# LIBRARY & INFORMATION CENTRE

## GIT in NEWS

**Loka Darshan 04-03-2016**

ಗೋಗಟೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ

### ನಾಳೆಯಿಂದ ತಾಂತ್ರಿಕ ಹಬ್ಬ

ಬೆಳಗಾವಿ 3. ಗೋಗಟೆ ತಾಂತ್ರಿಕ ಮಹಾವಿದ್ಯಾಲಯದ ಎಂ.ಸಿಎ ವಿಭಾಗದ ವತಿಯಿಂದ ಶುಕ್ರವಾರ ದಿ.4 ಮತ್ತು ಶನಿವಾರ ದಿ.5 ರಂದು ಕ್ಲೆಸ್ಪರ್ಸ್–16 ರಾಷ್ಟ್ರೀಯ ಮಟ್ಟದ ಆಯ್.ಟಿ ಹಬ್ಬವನ್ನು ಆಚರಿಸಲಾಗುವುದು. ಈ ಹಬ್ಬವು ವಿದ್ಯಾರ್ಥಿಗಳ ಕೌಶಲ್ಯತೆಯನ್ನು ಹೆಚ್ಚಿಸುವುದಕ್ಕೆ ನೆರವಾಗುತ್ತದೆ.

**Loka Darshan 04-03-2016**

### ಜಿಐಟಿ ಕಾಲೇಜಿಗೆ ಸಮಗ್ರ ವೀರಾಗ್ರಣಿ ಪ್ರಶಸ್ತಿ

ಬೆಳಗಾವಿ 3. ಕರ್ನಾಟಕ ಕಾನೂನು ಸಂಸ್ಥೆಯ ವ್ಯವಸ್ಥಾಪನಾ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯು 'ಬಿಡಿಬಿಬಿಎ' ಸಂಸ್ಥೆಯ ಸಹಯೋಗದಲ್ಲಿ ದಿ. 1 ರಂದು ಕೆಎಲ್ಎಸ್ ಐಎಂಇಆರ್ ಆವರಣದಲ್ಲಿ ಮಿಸ್ಟರ್ ಗ್ಲೇಡಿಯೇಟರ್–2016 ಕೆಎಲ್ಎಸ್ ಸೊಸೈಟಿಯ ಅಂಗ ಸಂಸ್ಥೆಗಳ ದೇಹದಾರ್ಢ್ಯ ಸ್ಪರ್ಧೆ ಹಾಗೂ ಮಿಸ್ಟರ್ ಐಎಂಇಆರ್–2016 ಜಿಲ್ಲಾ ಮಟ್ಟದ ಅಂತರ ಕಾಲೇಜು ದೇಹದಾರ್ಢ್ಯ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಮಿಸ್ಟರ್ ಗ್ಲೇಡಿಯೇಟರ್ ಸ್ಪರ್ಧೆಯಲ್ಲಿ 19 ವಿದ್ಯಾರ್ಥಿಗಳು ಹಾಗೂ ಮಿಸ್ಟರ್ ಐಎಂಇಆರ್ 2016 ಸ್ಪರ್ಧೆಯಲ್ಲಿ 40 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬಿಡಿಬಿಬಿಎ ಅಧ್ಯಕ್ಷ ಅವಿನಾಶ ಪೋತದಾರ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತ ಇಂದಿನ ಒತ್ತಡಮಯ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ವ್ಯಯಾಮ ಹಾಗೂ ಆರೋಗ್ಯದ ಮಹತ್ವದ ಕುರಿತು ವಿವರಿಸಿದರು.

ಕೆಎಲ್ಎಸ್. ಐಎಂಇಆರ್ ಚೇರಮನ್ ರಾಜೇಂದ್ರ ಬೆಳಗಾಂವಕರ ಅಧ್ಯಕ್ಷತೆ ವಹಿಸಿದ್ದರು. ಬಿಡಿಬಿಬಿಎ ಅಂತರಾಷ್ಟ್ರೀಯ ತೀರ್ಪುಗಾರ ಅಜಿತ್ ಸಿದ್ದಣ್ಣವರ್, ರಾಷ್ಟ್ರೀಯ ತೀರ್ಪುಗಾರ ಪ್ರಕಾಶ ಪೂಜಾರಿ, ಜಿಲ್ಲಾ ಸೆಕ್ರೆಟರಿ ಗಂಗಾಧರ ಎಂ. ಮತ್ತಿತರರು ಕಾರ್ಯಕ್ರಮದ ತೀರ್ಪುಗಾರರಾಗಿ ಭಾಗವಹಿಸಿದ್ದರು.

ಮೀಸ್ಟರ್ ಗ್ಲೇಟಿಯೇಟರ್–2016 ಸ್ಪರ್ಧೆಯಲ್ಲಿ ಮಿಸ್ಟರ್ ಗ್ಲೇಡಿಯೇಟರ್ ಜಿಐಟಿ ಕಾಲೇಜಿನ ಅಮಿತ್ ಚೌಗುಲೆ, ಮೋಸ್ಟ್ ಮಸ್ಕ್ಯುಲಾರ್ ಮ್ಯಾನ್ ಅನೀಸ್ ಫಣಿಬಂದ್, ಮಿಸ್ಟರ್ ಮಾಛೋ ಜಿಸಿಸಿ ಕಾಲೇಜಿನ ಮುರಳೀಧರ ಶಿಂಧೆ ಆಯ್ಕೆಯಾದರು.

ವಿಪಿ ಪೊಲಿಟೆಕ್ನಿಕ್ ಸಮಗ್ರ ವೀರಾಗ್ರಣಿ ಪ್ರಶಸ್ತಿಯನ್ನು, ಬೆಸ್ಟ್ ಪೋಸರ್ ಬಹುಮಾನವನ್ನು ಪ್ರಥಮೇಶ್ ಜಿಐಟಿ ತಾಂತ್ರಿಕ ಕಾಲೇಜ ತನ್ನದಾಗಿಸಿಕೊಂಡಿತು.

ಮಿಸ್ಟರ್ ಐಎಂಇಆರ್–2016 ಸ್ಪರ್ಧೆಯಲ್ಲಿ ಮಿಸ್ಟರ್ ಐಎಂಇಆರ್–2016 ಪಂಡಿತ ನೆಹರು ಕಾಲೇಜಿನ ದರ್ಶನ ಪಾಟೀಲ, ಬೆಸ್ಟ ಪೋಸರ್ ಆರ್‌ಪಿಡಿ ಕಾಲೇಜಿನ ನೀಲಕಂಠ ಕೆ.ಎನ್ ಪಡೆದುಕೊಂಡರೆ, ಸಮಗ್ರ ವೀರಾಗ್ರಣಿ ಆರ್‌ಪಿಡಿ ಕಾಲೇಜ ಮುಡಿ ಸೇರಿತು.

ಡಾ.ಪುರುಷೋತ್ತಮ ಬಂಗ್ ಅವರು ಗಣ್ಯರನ್ನು ಸನ್ಮಾನಿಸಿದರು. ಸಂಘಟನಾ ಕಾರ್ಯದರ್ಶಿ ಅಮಿತ ಜಡೆ, ಕ್ರೀಡಾ ಸಂಯೋಜಕ, ಶ್ರೀಕಾಂತ ನಾಯಿಕ, ವಿಠ್ಠಲ ದೇಶಪಾಂಡೆ ಹಾಗೂ ಸುನಿಲ ಕುಲಕರ್ಣಿಯವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಸಯಿಶೀಲಾ ಜಡೆಯವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

